ಒಕ್ಲಹೋಮದಲ್ಲೋ. ಹಾಗೆಲ್ಲ ನಾವು ಅಪ್ಪಿ ಮುತ್ತಿಟ್ಟು ಸ್ನೇಹ ತೋರಿ ವರ್ಷಗಳೇ ಆಗಿ ಹೋಗಿವೆ. ಕಳೆದ ವಾರ ಕರೆ ಮಾಡಿದಾಗ ಈ ತಿಂಗಳ ಕೊನೆಗೆ ಐದು ದಿನ ಮನೆಗೆ ಬರುವವನಿದ್ದೇನೆ ಅಂದಿದ್ದ. ಕೊನೆಯ ದಿನ ಫೋನು ಮಾಡಿ ಅಲ್ಲಿಂದಲೇ ಇನ್ನೆಲ್ಲೋ ಡೆಲಿವರಿ ಇತ್ತು ಮುಂದಿನ ತಿಂಗಳು ಬರುವೆ ಅಂದರೂ ಅಂದನೇ. ಹಾಗೆಲ್ಲ ಅವನು ಬರದಿದ್ದರೂ ಏನೂ ಫರಕು ಬೀಳುವುದಿಲ್ಲ ಅನ್ನುವುದು ನಿಜ. ಆದರೆ, ಈ ಬಾರಿ ಸುಹಾಸ ಬಂದರೆ ಮಾಕೋನ ರಾತ್ರಿಯ ಓಡಾಟಗಳ ಕುರಿತು, ಅವನಿಗೆ ಕೊಟ್ಟಿರುವ ಸ್ವಾತಂತ್ರ್ಯಗಳ ಕುರಿತು ನಾವಿಬ್ಬರೂ ಮಾತಾಡಿಕೊಂಡು ಒಂದು ಒಮ್ಮತದ ನಿರ್ಧಾರಕ್ಕೆ ಬರಬಹುದೇನೋ ಎಂದೆನಿಸಿತು.

ಸುಹಾಸ ಲಾಂಗ್ ಹೌಲ್ ಟ್ರಕ್ಕುಗಳಲ್ಲಿ ಡ್ರೈವರ್ ಆಗಿ ಕೆಲಸ ಮಾಡುತ್ತಾನೆ. ಐದು ವರ್ಷಗಳಿಗೊಮ್ಮೆ ಕಂಪನಿಗಳನ್ನು ಬದಲಿಸುತ್ತಲೇ ಇರುತ್ತಾನಾದ್ದರಿಂದ ಅವನು ಈಗ ಯಾವ ಕಂಪನಿಗಾಗಿ ಟ್ರಕ್ಕುಗಳನ್ನು ಓಡಿಸುತ್ತಿದ್ದಾನೆ ಅಂತ ತಕ್ಷಣ ನನಗೆ ಹೇಳಲು ಆಗುವುದಿಲ್ಲ. ಅವನು ರಸ್ತೆಯ ನಿಯಮಗಳನ್ನು ಒಮ್ಮೆಯೂ ಉಲ್ಲಂಘಿಸದೇ ಸ್ವಚ್ಛವಾಗಿಟ್ಟುಕೊಂಡಿರುವ ಟ್ರಾಕ್ ರೆಕಾರ್ಡ್ ಬಗ್ಗೆ, ಆ ಪರಿಣಾಮವಾಗಿ ಸಿಗುವ ಘನ ಸಂಬಳದ ಬಗ್ಗೆ ಅವನಿಗೆ ಅಭಿಮಾನವಿದೆ. ಈ ಕೆಲಸದ ಒಂದೇ ದೋಷವೆಂದರೆ ಅವನು ತಿಂಗಳ ಇಪ್ಪತ್ತೈದು ದಿನ ಟ್ರಕ್ಕಿನಲ್ಲೇ ಊರೂರು ಸುತ್ತುತ್ತ ಇರಬೇಕಾಗುತ್ತದೆ. ಬೃಹದಾಕಾರದ ಈ ಟ್ರಕ್ಕಿನಲ್ಲಿಯೇ ಹಾಸಿಗೆ, ಟಾಯ್ಲೆಟ್ಟು, ಶವರ್, ಕಿಚನ್ ಎಲ್ಲವೂ ಇರುತ್ತದಾದರೂ ಇಲ್ಲಿ ನನಗೆ ದೋಸೆ ಚಟ್ನಿಯನ್ನೋ, ಅವನಿಗಿಷ್ಟದ ಅನ್ನ – ಬೂದುಗುಂಬಳಕಾಯಿ ಹುಳಿಯನ್ನೋ, ಮೀನು ಸಾರನ್ನೋ ಉಣ್ಣುವಾಗ ಗಂಟಲು ಕಟ್ಟಿದಂತಾಗುತ್ತದೆ.

ಅವನು ಈ ಕೆಲಸ ಮಾಡದಿದ್ದರೆ ನ್ಯೂಜರ್ಸಿಯಂಥ ಕಡೆ ನಮಗೆ ಮನೆ ನಡೆಸಲು ಸಾಧ್ಯವಿರಲಿಲ್ಲ. ನಾನೂ ಸಮೀಪದ ಮಾಲ್‌ನಲ್ಲಿ ಮೇಸೀಸ್ ಎಂಬ ಬಟ್ಟೆ ಅಂಗಡಿಯಲ್ಲಿ ಸೇಲ್ಸ್‌ನಲ್ಲಿ ಕೆಲಸ ಮಾಡುತ್ತೇನಾದರೂ ನನಗೆ ಸುಹಾಸನ ಕಾಲು ಭಾಗ ಸಂಬಳವೂ ಬರುವುದಿಲ್ಲ. ಭಾರತದಿಂದ ಅಮೆರಿಕಕ್ಕೆ ಬರುವ ಸಾಫ್ಟ್‌ವೇರಿಗರ ಹಾಗೆ ನಮ್ಮಿಬ್ಬರಿಗೂ ಡಿಗ್ರಿಗಳ ಬಲವಿಲ್ಲ. ಇಲ್ಲಿಗೆ ಬರುವ ಮುಂಚೆ, ಇಪ್ಪತ್ತು ವರ್ಷಗಳ ಕೆಳಗೆ ಸುಹಾಸ ಅಮೆರಿಕದ ಜೀವನಕ್ರಮದ ಕುರಿತಾದ ಭ್ರಮೆಗಳನ್ನು ನನ್ನಿಂದ ಆದಷ್ಟು ದೂರದಲ್ಲಿಡಲೇ ಶ್ರಮಿಸಿದ್ದ.

ಹುಬ್ಬಳ್ಳಿಯ ಕಾಡಸಿದ್ದೇಶ್ವರ ಕಾಲೇಜಿನಲ್ಲಿ ನಾನು ಬಿ.ಎ. ಫೈನಲ್ ಓದುತ್ತಿದ್ದಾಗ ಕೂಡಿ ಬಂದಿದ್ದ ಸಂಬಂಧ ಸುಹಾಸನದು. ಅಮೆರಿಕದಲ್ಲಿ ಅದೇನೋ ಲಾಟರಿ ಗೆದ್ದಿದ್ದಾನಂತೆ, ಅದಕ್ಕಾಗಿ ಅವನನ್ನು ಅಲ್ಲಿಯೇ ಕರೆಸಿಕೊಳ್ಳುತ್ತಾರಂತೆ ಅಂತ ನಮ್ಮ ಸಂಬಂಧಿಕರಲ್ಲೆಲ್ಲ ಸುದ್ದಿಯಾಗಿತ್ತು. ಈ ಒಸಗೆ ಹರಡುತ್ತಲೇ ಬಿ.ಕಾಂ. ನಪಾಸಾಗಿ ಐದಾರು ವರ್ಷಗಳಿಂದ ಸ್ವಂತ ಟ್ಯಾಕ್ಸಿ ಬಿಸಿನೆಸ್ ಶುರು ಮಾಡಿದ್ದ ಸುಹಾಸನ ಮುಂದೆ ಹುಡುಗಿಯರ ಜಾತಕಗಳು ಪುತಪುತನೆ ಉದುರಲು ಶುರುವಾಗಿದ್ದವು. ಈಗಾಗಲೇ ಹತ್ತಾರು ಮದುವೆಗಳಲ್ಲಿ ಸುಹಾಸನನ್ನು ನೋಡಿದ್ದೆನಾದರೂ ಈ

